# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 972 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಡಿ.ಟಿ.ಶ್ರೀನಿವಾಸ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 14-03-2025 |
| ಉತ್ತರಿಸುವ ಸಚಿವರು | : | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಶ್ರೀ.ಎಲ್.ಜಿ.ಹಾವನೂರು ಆಯೋಗದ ವರದಿಯಲ್ಲಿ ಹಿಂದುಳಿದ ವರ್ಗ ಎಂಬ ಗುಂಪಿನಲ್ಲಿದ್ದ ಜಾತಿಗಳನ್ನು ಪ್ರಸ್ತುತ ಚೆನ್ನಪ್ಪ ರೆಡ್ಡಿ ಆಯೋಗದ ವರದಿಯಲ್ಲಿ ಪ್ರವರ್ಗ-1ರ ಗುಂಪಿಗೆ ಸೇರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಶ್ರೀ ಎಲ್.ಜಿ. ಹಾವನೂರು ಆಯೋಗದ ವರದಿಯಲ್ಲಿ ಹಿಂದುಳಿದ ವರ್ಗ ಎಂಬ ಗುಂಪಿನಲ್ಲಿದ್ದ ಜಾತಿಗಳನ್ನು ನಂತರದಲ್ಲಿ ಜಾರಿಗೆ ಬಂದ ಆಯೋಗದ ವಿವಿಧ ವರದಿಗಳನ್ವಯ ಹಿಂದುಳಿದ ವರ್ಗದಡಿ ನಮೂದಿಸಿದ್ದ ಕೆಲವು ಜಾತಿಗಳನ್ನು ಹೊರತುಪಡಿಸಿ ಉಳಿದ ಜಾತಿಗಳನ್ನು ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ:30-03-2002ರ ಆದೇಶದನ್ವಯ 'ಪ್ರವರ್ಗ-1' ರಡಿ ಮುಂದುವರೆಸಲಾಗಿರುತ್ತದೆ. |
| ಆ) | ಬಂದಿದ್ದಲ್ಲಿ, ಹಿಂದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರೆಗೆ ನೀಡುತ್ತಿದ್ದ ಎಲ್ಲಾ ಸೌಲಭ್ಯಗಳನ್ನು ಹಿಂದುಳಿದ ವರ್ಗದ ಜನಾಂಗದವರೆಗೆ ನೀಡಲಾಗುತ್ತಿದ್ದು, ಪ್ರಸ್ತುತ ಪ್ರವರ್ಗ-1ರ ಜಾತಿಗಳಿಗೆ ನೀಡದಿರಲು ಕಾರಣವೇನು; | ಭಾರತದ ಸಂವಿಧಾನ ಅನುಚ್ಛೇಧ-46 ರನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ವಿಶೇಷ ಅನುಬಂಧವನ್ನು ಕಲ್ಪಿಸಲಾಗಿದ್ದು, ಆದರೆ ಹಿಂದುಳಿದ ವರ್ಗಗಳಿಗೆ ಸೇರಿದ ಪ್ರವರ್ಗ-1ಕ್ಕೆ ಸಾಂವಿಧಾನಿಕ ಸ್ಥಾನಮಾನ ಕಲ್ಪಿಸಿರುವುದಿಲ್ಲ.<br><br>ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವಿವಿಧ ವರದಿಗಳನ್ವಯ ಪ್ರವರ್ಗ-1 ರಲ್ಲಿ ಬರುವ ಜಾತಿಗಳು ಅತೀ ಹಿಂದುಳಿದವುಗಳಾಗಿದ್ದು, ಸದರಿ ವರದಿಗಳನ್ವಯ ಪ್ರವರ್ಗ-1ಕ್ಕೆ ಶೈಕ್ಷಣಿಕ ಸಂಸ್ಥೆಗಳ ಪ್ರವೇಶಾವಕಾಶದಲ್ಲಿ ಹಾಗೂ ನೇರ ನೇಮಕಾತಿಯ ಮೀಸಲಾತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಾದರಿಯಲ್ಲಿಯೇ ಕೆನೆಪದರ ನೀತಿಯಿಂದ ವಿನಾಯಿತಿ ನೀಡಲಾಗಿರುತ್ತದೆ.<br><br>ಮುಂದುವರೆದು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಅಭಿವೃದ್ಧಿ ಯೋಜನೆಗಳಲ್ಲಿ ಪ್ರವರ್ಗ-1ಕ್ಕೆ ಸೇರಿದ ಅಭ್ಯರ್ಥಿ / ಫಲಾನುಭವಿಗಳಿಗೆ ಅರ್ಜಿ ಸಲ್ಲಿಸಲು ಇತರೆ ಹಿಂದುಳಿದ ವರ್ಗಗಳಿಗಿಂತ ಹೆಚ್ಚಿನ ಆದಾಯ ಮಿತಿಯನ್ನು ನೀಡಲಾಗುತ್ತಿರುತ್ತದೆ. |

...2..

| | | |
|---|---|---|
| ಇ) | ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರಿಗೆ ನೀಡುತ್ತಿದ್ದ ಸೌಲಭ್ಯಗಳನ್ನು ಈ ಹಿಂದೆ ಪ್ರವರ್ಗ-1ರ ಜಾತಿಗಳಿಗೂ ನೀಡುತ್ತಿದ್ದು, ಪ್ರಸ್ತುತ ಸೌಲಭ್ಯಗಳನ್ನು ನೀಡದಿರುವುದರಿಂದ ಈ ಜನಾಂಗದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದಿಲ್ಲವೇ; | ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಯೋಜನೆಗಳಡಿಯಲ್ಲಿ ಪ್ರವರ್ಗ- 1 ಮತ್ತು 2ಎ ಗೆ ಶೇಕಡಾ 85% ರಷ್ಟು ಮೀಸಲಾತಿಯನ್ನು ಪ್ರವರ್ಗ-3ಎ, ಪ್ರವರ್ಗ-3ಬಿ ಗೆ ಶೇಕಡಾ 15% ರಷ್ಟು ಮೀಸಲಾತಿ ಅನುಪಾತವನ್ನು ಅನುಸರಿಸಲಾಗುತ್ತಿದೆ.<br><br>ಪ್ರವರ್ಗ-1ರಡಿ ಬರುವ ಜಾತಿಗಳ ಪೈಕಿ ಈ ಕೆಳಕಂಡ ಜಾತಿಗಳಿಗೆ ಪ್ರತ್ಯೇಕ ನಿಗಮವನ್ನು ಸ್ಥಾಪಿಸಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>1. ಕರ್ನಾಟಕ ಅಲೆಮಾರಿ / ಅರೆ-ಅಲೆಮಾರಿ ಅಬಿವೃದ್ಧಿ ನಿಗಮ.<br>2. ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ.<br>3. ಕರ್ನಾಟಕ ಉಪ್ಪಾರ ಸಮುದಾಯಗಳ ಅಭಿವೃದ್ಧಿ ನಿಗಮ.<br>4. ಕರ್ನಾಟಕ ಕಾಡುಗೊಲ್ಲ ಅಭಿವೃದ್ಧಿ ನಿಗಮ. |
| ಈ) | ಸದರಿ ಸೌಲಭ್ಯಗಳನ್ನು ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಹಿಂದುಳಿದ ವರ್ಗಗಳ ಪ್ರವರ್ಗ-1ರ ಅಡಿಯಲ್ಲಿ ಬರುವ ಜಾತಿಗಳಿಗೆ ಸಂವಿಧಾನ ಅನುಚ್ಛೇದ 15(4) ಮತ್ತು 16(4)ರ ಅನ್ವಯ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವ ಶೈಕ್ಷಣಿಕ ಸಂಸ್ಥೆಗಳಲ್ಲಿ ಹಾಗೂ ಉದ್ಯೋಗ ನೇಮಕಾತಿಗಳಲ್ಲಿ ಮೀಸಲಾತಿ ಸೌಲಭ್ಯಗಳನ್ನು ಕಲ್ಪಿಸಲಾಗಿರುತ್ತದೆ. ಅದರಂತೆ ಶೇಕಡ 4% ರಷ್ಟು ಮೀಸಲಾತಿ ಸೌಲಭ್ಯವನ್ನು ನೀಡಲಾಗಿದೆ ಮತ್ತು ಪ್ರವರ್ಗ-1ರಲ್ಲಿ ಬರುವ ಸಮುದಾಯಗಳಿಗೆ ಕೆನೆಪದರ ನೀತಿಯಿಂದ ವಿನಾಯಿತಿಯನ್ನು ನೀಡಲಾಗಿರುತ್ತದೆ.<br><br>ಹಿಂದುಳಿದ ವರ್ಗಗಳ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಅಭಿವೃದ್ಧಿ ಯೋಜನೆಗಳಲ್ಲಿ ಪ್ರವರ್ಗ-1ಕ್ಕೆ ಸೇರಿದ ಅಭ್ಯರ್ಥಿ/ ಫಲಾನುಭವಿಗಳಿಗೆ ಅರ್ಜಿ ಸಲ್ಲಿಸಲು ಇತರೆ ಹಿಂದುಳಿದ ವರ್ಗಗಳಿಗಿಂತ ಹೆಚ್ಚಿನ ಆದಾಯ ಮಿತಿಯನ್ನು (ರೂ.2.50 ಲಕ್ಷಗಳು) ನೀಡಲಾಗುತ್ತಿರುತ್ತದೆ. ಇದರಿಂದ ಹಿಂದುಳಿದ ವರ್ಗಗಳ ಇತರೆ ಪ್ರವರ್ಗಗಳಿಗೆ (ರೂ.1.00 ಲಕ್ಷಗಳು) ಹೋಲಿಸಿದಲ್ಲಿ ಪ್ರವರ್ಗ-1ರ ವಿದ್ಯಾರ್ಥಿಗಳಿಗೆ ಹೆಚ್ಚಿನ ಆದ್ಯತೆ ದೊರಕಿದಂತಾಗುತ್ತದೆ.<br><br>ಹಿಂದುಳಿದ ವರ್ಗಗಳಿಗೆ ಸೇರಿದ ಸಂಘ ಸಂಸ್ಥೆಗಳಿಗೆ ಸಮುದಾಯ ಭವನ / ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕೆ ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದಡಿ ಆಯವ್ಯಯದಲ್ಲಿ ಹಂಚಿಕೆ ಯಾಗುವ ಅನುದಾನದ ಶೇ.70% ರಷ್ಟನ್ನು ಪ್ರವರ್ಗ-1 ಹಾಗೂ 2ಎ ಸಮುದಾಯಕ್ಕೆ ಹಾಗೂ ಶೇ.30 ರಷ್ಟನ್ನು ಪ್ರವರ್ಗ-3ಎ ಹಾಗೂ 3ಬಿ ಸಮುದಾಯಕ್ಕೆ ಹಂಚಿಕೆ ಮಾಡಲಾಗುತ್ತಿದೆ (ವಿಶೇಷ ಸಂದರ್ಭದಲ್ಲಿ ಈ ಷರತ್ತನ್ನು ಸಡಿಲಗೊಳಿಸಿ ಸರ್ಕಾರ ಹೆಚ್ಚುವರಿ ಹಂಚಿಕೆ ಮಾಡಬಹುದಾಗಿರುತ್ತದೆ). |

| | | |
|---|---|---|
| | | ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 44 ಶಾಸನ 2023, ದಿನಾಂಕ:10-06-2024ರನ್ವಯ ನಿರ್ಮಾಣ ಕಾಮಗಾರಿಗಳ ಮೌಲ್ಯ ಒಂದು ಕೋಟಿ ರೂಪಾಯಿಗಳಿಗೆ ಮೀರದ ಅಂಥ ಕಾಮಗಾರಿಗಳ ಸಂಖ್ಯೆಯ ಶೇಕಡ 4% ರಷ್ಟನ್ನು ಮೀರದಂತೆ ಹಿಂದುಳಿದ ವರ್ಗಗಳ ಪ್ರವರ್ಗ-1 ರಡಿ ಬರುವ ಸಮುದಾಯಗಳಿಗೆ ಮೀಸಲಾತಿಯನ್ನು ಕಲ್ಪಿಸಲಾಗಿರುತ್ತದೆ.<br><br>ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನ ಗೊಳಿಸುತ್ತಿರುವ ಎಲ್ಲಾ ಯೋಜನೆಗಳ ಅಡಿಯಲ್ಲಿ ಪ್ರವರ್ಗ- 1 ಮತ್ತು 2ಎ ಗೆ ಶೇಕಡಾ 85% ರಷ್ಟು ಮೀಸಲಾತಿಯನ್ನು ಪ್ರವರ್ಗ-3ಎ, ಪ್ರವರ್ಗ-3ಬಿ ಗೆ ಶೇಕಡಾ 15% ರಷ್ಟು ಮೀಸಲಾತಿ ಅನುಪಾತವನ್ನು ಅನುಸರಿಸಲಾಗುತ್ತಿದೆ.<br><br>ಈ ಕೆಳಕಂಡ ಸಮುದಾಯಗಳಿಗೆ ಪ್ರತ್ಯೇಕ ನಿಗಮವನ್ನು ಸ್ಥಾಪಿಸಿ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸಲಾಗುತ್ತಿದೆ.<br><br>1. ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಅಬಿವೃದ್ಧಿ ನಿಗಮ.<br>2. ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ.<br>3. ಕರ್ನಾಟಕ ಉಪ್ಪಾರ ಸಮುದಾಯಗಳ ಅಭಿವೃದ್ಧಿ ನಿಗಮ.<br>4. ಕರ್ನಾಟಕ ಕಾಡುಗೊಲ್ಲ ಅಭಿವೃದ್ಧಿ ನಿಗಮ.<br><br>ಮೇಲ್ಕಂಡ ಅಭಿವೃಧ್ಧಿ ನಿಗಮಗಳಲ್ಲಿ ಪ್ರವರ್ಗ-1ರಲ್ಲಿ ಬರುವ ಸಮುದಾಯಗಳ ಅಭಿವೃಧ್ಧಿಗಾಗಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಟಾನ ಗೊಳಿಸಲಾಗುತ್ತಿದೆ.<br><br>1. ಸ್ವಯಂ ಉದ್ಯೋಗ ನೇರ ಸಾಲ ಯೋಜನೆ<br>2. ಅರಿವು ಶೈಕ್ಷಣಿಕ ಸಾಲ ಯೋಜನೆ<br>3. ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಸಾಲ ಯೋಜನೆ<br>4. ಗಂಗಾ ಕಲ್ಯಾಣ ನೀರಾವರಿ ಯೋಜನೆ<br>5. ಸ್ವಾವಲಂಬಿ ಸಾರಥಿ ಯೋಜನೆ<br>6. ಬ್ಯಾಂಕ್ ಗಳ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಸಾಲ ಯೋಜನೆ |

ಸಂಖ್ಯೆ:ಹಿಂವಕ 103 ಬಿಸಿಎ 2025

(ಶಿವರಾಜ ಎಸ್. ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.